ಸೃಜನಿ

SRUJANI: Indian Journal of Innovative Research and Development (SIJIRD)
Volume-4 Issue 6, January-February 2026, Pp. 1-5
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

# ಮಹಾ ಪ್ರಸಾದಿ ಗಬ್ಬೂರಿನ ಬಿಬ್ಬಿ ಬಾಚರಸ

**ಡಾ. ಸಾಬಣ್ಣ**
ತಾತ್ಕಾಲಿಕ ಅಧ್ಯಾಪಕರು, ಕನ್ನಡ ವಿಶ್ವವಿದ್ಯಾಲಯ, ಹಂಪಿ. ವಿಸ್ತರಣಾ ಕೇಂದ್ರ ದೇವದುರ್ಗ.

***Abstract:***
*ಗಬ್ಬೂರಿನ ಬಿಬ್ಬಿ ಬಾಚಾರಸರ ಮಹಾಪ್ರಸಾದದ ಪರಿಕಲ್ಪನೆ ಕೇವಲ ಧಾರ್ಮಿಕ ಆಚರಣೆಯ ಅಂಶವಾಗಿ ಸೀಮಿತವಾಗದೆ, ಆಂತರಂಗ ಹಾಗೂ ಬಹಿರಂಗ ಶುದ್ಧಿ ಮತ್ತು ಮಾನವೀಯ ಮೌಲ್ಯಗಳ ಪ್ರತೀಕವಾಗಿ ರೂಪುಗೊಂಡಿದೆ. ಬಾಚಾರಸರ ವಚನಗಳಲ್ಲಿ ಪ್ರತಿಪಾದಿತವಾದ ಪ್ರಸಾದದ ತಾತ್ವಿಕ ಅರ್ಥವನ್ನು ವಿಶ್ಲೇಷಿಸುವ ಪ್ರಯತ್ನದ ಜೊತೆಗೆ ಅವರ ದೃಷ್ಟಿಯಲ್ಲಿ ಪ್ರಸಾದವು ದೇವಾಲಯದಲ್ಲಿ ದೊರೆಯುವ ಆಹಾರವಷ್ಟೇ ಅಲ್ಲ; ಅಹಂಕಾರ ತ್ಯಾಗ, ಸಮಾನತೆ, ಕಾಯಕದ ಭಾವ ಹಾಗೂ ಸತ್ಯನಿಷ್ಠ ಬದುಕಿನ ಅನುಭವವೇ ನಿಜವಾದ ಪ್ರಸಾದ. ಪ್ರಸಾದವನ್ನು ಅವರು ಸಾಮಾಜಿಕ ಸಮಾನತೆ ಮತ್ತು ಮಾನವೀಯ ಏಕತೆಯ ಸಾಧನವಾಗಿ ಕಾಣುತ್ತಾರೆ. ಜಾತಿ, ಧರ್ಮ, ವರ್ಗ ಭೇದಗಳನ್ನು ಮೀರಿ ಎಲ್ಲರಿಗೂ ಸಮಾನವಾಗಿ ಹಂಚಲ್ಪಡುವ ಪ್ರಸಾದದ ಕಲ್ಪನೆಯು ವಚನ ಚಳವಳಿಯ ಮಾನವತವಾದ ಮತ್ತು ಸಮಾನತಾವಾದದ ಪ್ರತಿಬಿಂಬವಾಗಿರುವುದನ್ನು ಸ್ಪಷ್ಟಪಡಿಸುತ್ತದೆ. ಬಾಚಾರಸರ ವಚನಗಳಲ್ಲಿ ವ್ಯಕ್ತವಾಗುವ ಪ್ರಸಾದದ ಪರಿಕ್ಪನೆಯು ಆಧ್ಯಾತ್ಮಿಕ ಹಾಗೂ ಸಾಮಾಜಿಕ ಆಯಾಮಗಳನ್ನು ಜಾಗೃತಗೊಳಿಸುವ ಮೂಲಕ ಮಾನವನ ಅಂತರಂಗದ ಪರಿವರ್ತನೆಯ ಜೊತೆಗೆ ಮಾನವಕೇಂದ್ರಿತ ಬದುಕಿನ ಮೌಲ್ಯಗಳೊಂದಿಗೆ ಹೇಗೆ ಬೆಸೆದುಕೊಂಡಿದೆ ಎಂಬುದನ್ನು ಈ ಲೇಖನ ನಿರೂಪಿಸಲಾಗಿದೆ.*

**Keywords:** *ಗಬ್ಬೂರು, ಬಿಬ್ಬಿ ಬಾಚಾರಸರು, ವಚನ ಸಾಹಿತ್ಯ, ಪ್ರಸಾದ, ಆಧ್ಯಾತ್ಮಿಕತೆ, ಅಹಂಕಾರ ತ್ಯಾಗ, ಸಮಾನತೆ, ಮಾನವೀಯ ಮೌಲ್ಯಗಳು*

## ಪೀಠಿಕೆ

ಭಾರತೀಯ ಸಂಸ್ಕೃತಿಯಲ್ಲಿ ಪ್ರಸಾದವು ಕೇವಲ ಧಾರ್ಮಿಕ ಆಚರಣೆಯ ಒಂದು ಅಂಗ ಮಾತ್ರವಲ್ಲ, ಅದು ಆತ್ಮಶುದ್ಧಿ, ಸಾಮಾಜಿಕ ಏಕತೆ, ಹಸಿವಿನ ಹೊಟ್ಟೆಯನ್ನು ತುಂಬಿಸುವುದು, ಮಾನಸಿಕ ಶಾಂತಿಯ ಸಂಕೇತವಾಗಿದೆ. 'ಪ್ರಸಾದ' ಎಂಬ ಪದವೇ ಅನುಗ್ರಹ, ಕರುಣೆ ಮತ್ತು ದೈವೀ ಕೃಪೆ ಎಂಬ ಅರ್ಥಗಳನ್ನು ಒಳಗೊಂಡಿದೆ. ದೇವರಿಗೆ ಅರ್ಪಿಸಿದ ನೈವೇದ್ಯವು ಭಕ್ತರ ಕೈ ಸೇರುವ ಕ್ಷಣದಲ್ಲಿ ಅದು ದೈವಾನುಗ್ರಹದ ರೂಪ ಪಡೆಯುತ್ತದೆ. ಹೀಗಾಗಿ ಪ್ರಸಾದವು ಭೌತಿಕ ಆಹಾರಕ್ಕಿಂತಲೂ ಮಿಗಿಲಾಗಿ ಆಧ್ಯಾತ್ಮಿಕ ಮೌಲ್ಯವನ್ನು ಎತ್ತಿಹಿಡಿದಿದ್ದು ಶರಣರ ಕಾಲದಲ್ಲಿ.

ಧಾರ್ಮಿಕ ದೃಷ್ಟಿಯಿಂದ ಪ್ರಸಾದವು ಭಕ್ತ ಮತ್ತು ಭಗವಂತನ ನಡುವಿನ ಸಂಬಂಧವನ್ನು ಗಾಢಗೊಳಿಸುವ ಸೇತುವೆಯಾಗಿದೆ. ಪೂಜೆ, ಹವನ, ವ್ರತ, ಜಾತ್ರೆ ಮುಂತಾದ ಎಲ್ಲ ಧಾರ್ಮಿಕ

***Please cite this article as:*** ಸಾಬಣ್ಣ. (2026). ಮಹಾ ಪ್ರಸಾದಿ ಗಬ್ಬೂರಿನ ಬಿಬ್ಬಿ ಬಾಚರಸ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವಲಪ್‌ಮೆಂಟ್*, 4(6), 1–5

ವಿಧಿವಿಧಾನಗಳಲ್ಲಿ ಪ್ರಸಾದದ ಸ್ಥಾನ ಪ್ರಮುಖವಾಗಿದೆ. ಭಗವದ್ಗೀತೆಯಲ್ಲಿಯೂ ದೇವರಿಗೆ ಅರ್ಪಿಸಿದ ಆಹಾರವನ್ನು ಸೇವಿಸುವುದು ಪವಿತ್ರ ಕ್ರಿಯೆ ಎಂದು ಹೇಳಲಾಗಿದೆ. ದೇವರಿಗೆ ಸಮರ್ಪಿತವಾದ ವಸ್ತು ಶುದ್ಧೀಕರಿಸಲ್ಪಟ್ಟು ಪುನಃ ಭಕ್ತರ ಕೈ ಸೇರುವುದು, ಸಮರ್ಪಣಾ ಭಾವನೆಯ ಮಹತ್ವವನ್ನು ತೋರಿಸುತ್ತದೆ. ಈ ಕ್ರಿಯೆಯಲ್ಲಿ ಭಕ್ತನ ಅಹಂಕಾರ ಕಡಿಮೆಯಾಗುತ್ತಾ, ಕೃತಜ್ಞತೆ ಮತ್ತು ವಿನಮ್ರತೆ ಬೆಳೆದು ಬರುತ್ತವೆ. ಆದ್ದರಿಂದ ಪ್ರಸಾದ ಸೇವನೆ ಒಂದು ಆಂತರಿಕ ಶುದ್ಧೀಕರಣ ಪ್ರಕ್ರಿಯೆಯೆಂದು ಧಾರ್ಮಿಕ ತತ್ವಗಳು ಪ್ರತಿಪಾದಿಸುತ್ತವೆ.

ಸಾಮಾಜಿಕ ದೃಷ್ಟಿಕೋನದಿಂದ ಪ್ರಸಾದವು ಅತ್ಯಂತ ಶಕ್ತಿಶಾಲಿ ಏಕತಾ ಸೂತ್ರವಾಗಿದೆ. ದೇವಸ್ಥಾನಗಳಲ್ಲಿ ಅಥವಾ ಧಾರ್ಮಿಕ ಸಮಾರಂಭಗಳಲ್ಲಿ ಪ್ರಸಾದ ವಿತರಣೆ ಯಾವುದೇ ಜಾತಿ, ವರ್ಗ, ಲಿಂಗ ಅಥವಾ ಆರ್ಥಿಕ ಭೇದವಿಲ್ಲದೆ ನಡೆಯುತ್ತದೆ. ಎಲ್ಲರೂ ಒಂದೇ ಸಾಲಿನಲ್ಲಿ ನಿಂತು ಒಂದೇ ಪ್ರಸಾದವನ್ನು ಸ್ವೀಕರಿಸುವುದು ಸಮಾಜದಲ್ಲಿ ಸಮಾನತೆಯ ಸಂದೇಶವನ್ನು ಬಿತ್ತುತ್ತದೆ. ಈ ಪರಕಲ್ಪನೆಯು ವಚನಕಾರರ ಸಾಮಾಜಿಕ ಕ್ರಾಂತಿಯಿಂದ ಆರಂಭವಾದುದ್ದು ಎಂಬುದು ಅರ್ಥೈಸಿಕೊಳ್ಳಬೇಕಾಗಿದೆ. ಅನೇಕ ದೇವಾಲಯಗಳಲ್ಲಿ ನಡೆಯುವ ಅನ್ನದಾನ ಪರಂಪರೆ ಹಸಿವನ್ನು ತಣಿಸುವುದರ ಜೊತೆಗೆ ಮಾನವೀಯ ಮೌಲ್ಯಗಳನ್ನು ಬಲಪಡಿಸುತ್ತಿವೆ. ಹೀಗಾಗಿ ಪ್ರಸಾದವು ಕೇವಲ ಧಾರ್ಮಿಕ ಆಚರಣೆ ಮಾತ್ರವಲ್ಲ, ಸಾಮಾಜಿಕ ಸಮಾರಸ್ಯದ ಪರಿಣಾಮಕಾರಿ ಸಾಧನವಾಗಿದೆ.

ಕಲ್ಯಾಣ ಕರ್ನಾಟಕದ ವಚನ ಪರಂಪರೆಯಲ್ಲಿ ಗಬ್ಬೂರಿನ ಬಿಬ್ಬಿ ಬಾಚಾರಸರು ವಿಶಿಷ್ಟ ಸ್ಥಾನ ಪಡೆದ ವಚನಕಾರ. ರಾಯಚೂರು ಜಿಲ್ಲೆ ದೇವದುರ್ಗ ತಾಲೂಕಿನ ಗೊಬ್ಬೂರು ಗೋಪುರಗಳ ಊರು. ಚರಿತ್ರೆ ಹಾಗೂ ಐತಿಹಾಸಿಕ ಸಾಂಸ್ಕೃತಿಕ ಹಿನ್ನಲೆಯಲ್ಲಿ ತನ್ನದೇ ಆದ ಶ್ರೀಮಂತಿಕೆಯ ಹಾಗೂ ಶ್ರೀಮಂತ ಸಂಸ್ಕೃತಿಯಾಗಿ ಬೆಳಗಿದ ಶರಣರ ಬೀಡು ಎಂದು ಹೇಳಬಹುದು. 'ಈ ಪುಣ್ಯ ನೆಲದಲ್ಲಿ ಗೊಬ್ಬೂರಿನ ಬಾಚಯ್ಯನು ಕೂಡ ತನ್ನ ಉಗ್ಗಡಿಸುವ ಕಾಯಕದ ಗಬ್ಬಿಪವನೆಂದೇ ಪ್ರಸಿದ್ಧನಾದವನು 'ಗಬ್ಬಿದೇವ' ಪದಕ್ಕೆ ಬಿಬ್ಬದೇವ ಎಂಬ ಪಾಠಾಂತರವೂ ಉಂಟು' ಎಂದು ಡಾ.ಬಸವಲಿಂಗ ಸೊಪ್ಪಿಮಠರು ಅಭಿಪ್ರಾಯವಾಗಿದೆ. ಉಗ್ಗರಿಸುವ ಕಾಯಕ ಸಂಸ್ಕೃತಿಯ ಬಗ್ಗೆ ತಮ್ಮ ವಚನದಲ್ಲಿ ವಿಸ್ತಾರವಾಗಿ ಹೇಳಿದ್ದಾರೆ. ಇವರು ಪ್ರಸಾದ ಪ್ರಸನ್ನತೆಯ ಭಾವಗಳನ್ನು ಚೈತನ್ಯದ ಜಡದಲ್ಲಿ ಸವೆದು ಆತ್ಮದೊಳು ದೇಹವೆಲ್ಲ ಸವೆದಾದ ಮೇಲೆ ಉಳಿದುದೇನು? ಎನ್ನುವ ಪ್ರಶ್ನೆ ಮೂಡಿಸುತ್ತ ನಿರಾಕಾರದಲ್ಲಿ ಲೀನವಾಗುವ ಆತ್ಮ ಸಂಸ್ಕೃತಿಯನ್ನು ವಿಭಿನ್ನ ನೆಲೆಯಲ್ಲಿ ಆತ್ಮಸಾಕ್ಷಾತ್ಕಾರ ಮಾಡುತ್ತಾನೆ.

ಬಾಚರಸನು 'ಏಣಾಂಕಧರ ಸೋಮೇಶ್ವರಲಿಂಗ' ಎಂಬ ಅಂಕಿತ ನಾಮದಲ್ಲಿ 102 ವಚನಗಳನ್ನು ರಚಿಸಿದ್ದಾನೆ. ಇವರ ವಚನಗಳೂ ದೀರ್ಘವಲ್ಲದ ಸರಳವಾದ ಅಭಿವ್ಯಕ್ತಿಯಿಂದ ಕೂಡಿವೆ. ಬಾಚಯ್ಯನು ಬಸವಾದಿ ಶರಣರ ಪ್ರಥಮರ ಸಮಕಾಲೀನನು ಎನ್ನುವುದಕ್ಕೆ ಸಾಕ್ಷಿ ಎಂಬಂತೆ ಸಕಳೇಶ ಮಾದರಸ, ಚನ್ನಬಸವಣ್ಣ ಮೊದಲಾದವರು ಸ್ಮರಿಸುವದರಿಂದ ಇವರ ಸಮಕಾಲೀನ ಎಂದು ಇಲ್ಲವೆ ಅವರಿಗಿಂತ ಹಿರಿಯನಾಗಿರಬಹುದು.

12ನೇ ಶತಮಾನದಲ್ಲಿನ ಬಸವಾದಿ ಶರಣರಲ್ಲಿ ಪ್ರಮುಖನಾದ ಬಿಬ್ಬಿ ಬಾಚರಸನು ಪ್ರಸಾದ ಮಹಾತ್ಮೆಯಿಂದ ಪ್ರಸಿದ್ಧತೆಯನ್ನು ಪಡೆದು ಕೊಂಡಿದ್ದನು. ಇತನ ಊರು ಗಬ್ಬೂರು ತಂದೆ ಆದಿತ್ಯದೇವ ಜಾತಿಯಿಂದ ಬ್ರಾಹ್ಮಣನಾಗಿದ್ದರು, ಕಲ್ಯಾಣದ ಶರಣರ ಪ್ರಭಾವಕ್ಕೆ ಒಳಗಾಗಿ ವೀರಶೈವ ಧರ್ಮವನ್ನು ಅನುಸರಿಸಿ ಶಿವಶರಣನಾದನು. ಈತನ ಕಾಯಕ ಪ್ರಸಾದವನ್ನು ಸಂಗ್ರಹಿಸಿ ತಂದು ಹಸಿದವರಿಗೆ ದಾಸೋಹವನ್ನು ನೀಡುವುದು. ಈ ಪ್ರಸಾದ ಮಹಾತ್ಮೆ ಬಗ್ಗೆ ಅನೇಕ ಶರಣರು ತಮ್ಮ ವಚನಗಳಲ್ಲಿ ಕೊಂಡಾಡಿದ್ದಾರೆ. ಶಿವಶರಣರಾದ ಚನ್ನಬಸವಣ್ಣ, ಸತ್ಯಕ್ಕ, ಸಿದ್ಧರಾಮ, ಸಕಲೇಶ ಮಾದರಸ, ಮಾಡಿವಾಳ ಮಾಚಿದೇವ, ಗಡದಾಸಿ

ವೀರಣ್ಣ ಮೊದಲಾದ ವಚನಕಾರರು ಬಾಚರಸನ ಪ್ರಸಾದದ ಮಹಿಮೆಯನ್ನು ತಮ್ಮ ವಚನಗಳಲ್ಲಿ ಹೇಳಿದ್ದಾರೆ.

ಬಿಬ್ಬಿ ಬಾಚಯ್ಯನನ್ನು ಬಾಚರಸ ಎಂದು ಕರೆದವನು ಚನ್ನಬಸವಣ್ಣ. ಅದೇ ರೀತಿಯಾಗಿ ಸಕಳೇಶ ಮಾದರಸ, ಸಿದ್ಧರಾಮ, ಗಣಾದಿ ಬೀರಣ್ಣ, ಸತ್ಯಕ್ಕೆ ರಂತ ವಚನಕಾರರ ವಚನೆಗಳಲ್ಲಿ ಬಾಚರಸರನ ಪ್ರಸಾದದ ವೈಶಿಷ್ಟ್ಯತೆಯನ್ನು ಹೇಳಿಕೊಂಡಿದ್ದಾರೆ.

***"ಗುರು ಪ್ರಸಾದಿಗಳು ಅಪೂರ್ವ ಅಪೂರ್ವ***
***ಲಿಂಗ ಪ್ರಸಾದಿಗಳು ಅಪೂರ್ವ ಅಪೂರ್ವ***
***ಜಂಗಮ ಪ್ರಸಾದಿಗಳು ಅಪೂರ್ವ ಅಪೂರ್ವ***
***ಗುರುಪ್ರಸಾದಿ ಗುರುಭಕ್ತಯ್ಯ; ಲಿಂಗಪ್ರಸಾದಿ ಪ್ರಭುದೇವರು***
***ಜಂಗಮಪ್ರಸಾದಿ ಬಸವಣ್ಣ; ಪ್ರಸಾದ ಪ್ರಸಾದಿ ಬಿಬ್ಬಿಬಾಚಯ್ಯ***
***ಮಿಕ್ಕಿನ ಪ್ರಸಾದಿಗಳೆಲ್ಲರೂ ಆಪ್ಯಾಯನ ಪ್ರಸಾದಿಗಳು.***
***ಇಂತೀ ಚಚುರ್ವಿಧ ಪ್ರಸಾದಿಗಳ ಪ್ರಸಾದದಿಂದಾನು***
***ಬದುಕಿದೆನಯ್ಯ ಕೂಡಲ ಚನ್ನಸಂಗಮದೇವಾ!"*** [1]

ಎಂದು ಚನ್ನಬಸವಣ್ಣ ತನ್ನ ವಚನದಲ್ಲಿ ಹೇಳಿದ್ದಾನೆ. ಷಟ್‌ಸ್ಥಲ ಬ್ರಹ್ಮ ಎಂದು ಹೆಸರಾದ ಚನ್ನಬಸವಣ್ಣನಂತ ಮಹಾನಿಯರಿಂದ ಪ್ರಸಂಶೆಗಳು ಬರುತ್ತವೆ ಎಂದರೆ ಬಾಚರಸನ ಶ್ರೇಷ್ಠೆ ಮೆಚ್ಚುವಂತದ್ದು. ಭೀಮಕವಿಯ ತನ್ನ ಕೃತಿಯಾದ ಬಸವ ಪುರಾಣದಲ್ಲಿ ಇತನ ಬಗ್ಗೆ ದೀರ್ಘವಾಗಿ ಬರೆದಿದ್ದಾನೆ. ಬಸವ ಪುರಾಣದಲ್ಲಿ ವಿಸ್ತಾರವಾದ ಕಥಾ ನಿರೂಪಣೆಯನ್ನು ಹೊಂದಿದೆ. ಬಾಚರಸನಿಗಾಗಿ ಒಂದು ಸಂಧಿಯೆ ಮೀಸಲಾಗಿರಿಸಿದ್ದಾನೆ. ಈ ಪುರಾಣದಲ್ಲಿ ಪಾಲ್ಕುರಿಕೆ ಸೋಮನಾಥನಿಂದ ಸಂಗನಾಮಾತ್ಯದಿಂದ ಬಾಚರಸನ ಪರಿಚಯವಾಗಿದೆ ಎಂಬುದು ವಿವರಿಸಿದೆ. ಗಬ್ಬೂರಿನ ಬಾಚರಸ ಎಷ್ಟೊಂದು ಪ್ರಸಿದ್ಧಿಯನ್ನು ಪಡೆದಿದ್ದ ಎಂಬುದು ತಿಳಿಯುತ್ತದೆ.

ಬಿಬ್ಬಿ ಬಾಚಾರಸರ ವಚನಗಳನ್ನು ಗಮನಿಸಿದರೆ, ಅವರು ಪ್ರಸಾದವನ್ನು ದೈವಾನುಗ್ರಹದ ರೂಪವಾಗಿ ಮಾತ್ರವಲ್ಲ, ಮಾನವನ ಅಂತರಂಗ ಶುದ್ಧೀಕರಣದ ಸಾಧನವಾಗಿ ಕಂಡಿದ್ದಾರೆ. ದೇವರಿಗೆ ಅರ್ಪಿಸಿದ ನೈವೇದ್ಯ ಭಕ್ತರಿಗೆ ಪ್ರಸಾದವಾಗಿ ದೊರೆಯುವಂತೆ, ಮಾನವ ತನ್ನ ಅಹಂಕಾರವನ್ನು ದೇವರಿಗೆ ಅರ್ಪಿಸಿದಾಗ ನಿಜವಾದ ಪ್ರಸಾದ ದೊರೆಯುತ್ತದೆ ಎಂಬುದು ಅವರ ತಾತ್ವಿಕ ನಿಲುವು. ಅಹಂಕಾರ, ದ್ವೇಷ, ಲೋಭ, ಅಸೂಯೆಗಳನ್ನು ತ್ಯಜಿಸಿ ಬದುಕುವವನೇ ನಿಜವಾದ ಪ್ರಸಾದ ಸ್ವೀಕರಿಸಿದವನು ಎಂಬ ಸಂದೇಶ ಅವರ ವಚನಗಳಲ್ಲಿ ನಿರಂತರವಾಗಿ ಪ್ರತಿಧ್ವನಿಸುತ್ತದೆ. ಹೀಗಾಗಿ ಪ್ರಸಾದವು ಬಾಹ್ಯ ವಸ್ತುವಿಗಿಂತ ಅಂತರಂಗದ ಪರಿವರ್ತನೆಯ ಸಂಕೇತವೆಂದು ತಿಳಿಯಬಹುದು.

ಕಲ್ಯಾಣದ ಶರಣರ ವಚನಗಳಿಂದ ಸಾಮಾಜಿಕ ಕ್ರಾಂತಿಯನ್ನು ಉಂಟು ಮಾಡಿತು ಆ ಕಾಲದ ಸ್ಥಿತಿಗತಿಗಳನ್ನು ಅನುಭವದ ಪ್ರಖರತೆಗೆ ತಂದು ಪ್ರಭಾವಿಸುವ ಭಾವದಲ್ಲಿ ಇಲ್ಲಿನ ನೆಲ–ಜಲ ತನ್ನ ಪರಿಶುದ್ಧತೆಯ ಪರಿಭಾಷೆಯಲ್ಲಿ ರಿಂಗಣಿಸುವುದನ್ನು ಆತ್ಮಾನುಸಂಧಾನ ಮಾಡಿಕೊಳ್ಳಬೇಕಾಗಿದೆ. ತಮ್ಮ ಬಯಲು ಬದುಕನ್ನು ಕಣ್ಣೆದುರಿಗೆ ತರುವುದಕ್ಕೆ ಗುರು–ಲಿಂಗ ಜಂಗಮರ ತ್ರಿವಿಧ ದಾಸೋಹದಿಂದ ಬೆಳಗಿದ ಮಹಾನ್ ಶರಣನ ಕುರಿತು ತಿಳಿಯುದು ಮಹತ್ವದ್ದಾಗಿದೆ.

ದೇವದುರ್ಗ ತಾಲ್ಲೂಕು ಗಬ್ಬೂರು ಗ್ರಾಮದ ಬ್ರಾಹ್ಮಣ ಮನೆತನದಲ್ಲಿ ಹುಟ್ಟಿದ ಬಿಬ್ಬಿ ಬಾಚಯ್ಯ ಬ್ರಾಹ್ಮಣ್ಯವನ್ನು ತಿರಸ್ಕರಿಸಿ ಲಿಂಗಾಯತನಾಗುತ್ತಾನೆ. ಈ ಬಿಬ್ಬಿ ಬಾಚಯ್ಯನು ಶಿವಶರಣ ಬಸವೇಶ್ವರರ ಸಮಕಾಲೀನನಾಗಿದ್ದನು. ಬಾಚಯ್ಯನ ಪವಾಡದ ಮಹಿಮೆಯನ್ನು ಕುರಿತು ಡಾ. ಬಿ. ಚನ್ನಬಸಪ್ಪ ಅವರು ತಮ್ಮ ಮಹಾಪ್ರಬಂಧದಲ್ಲಿ ಈ ರೀತಿ ವಿವರಿಸಿದ್ದಾರೆ. 'ಒಂದು ದಿನ ಪೆದ್ದವಾಡ ಗ್ರಾಮದ ಹೊಲೆಯರ ಮನೆಯ ಭಕ್ತ ತನ್ನ ಮನೆಯಲ್ಲಿ ಮಹಾ ಪ್ರಸಾದವನ್ನಿಟ್ಟುಕೊಂಡಿದ್ದ ವಿಷಯ ತಿಳಿದ ಬಿಬ್ಬಿ

ಬಾಚಯ್ಯನು ಅಲ್ಲಿಗೆ ಹೋಗಿ ಪ್ರಸಾದ ಸ್ವೀಕರಿಸಿಕೊಂಡು, ಉಳಿದ ಪ್ರಸಾದವನ್ನು ಹೆಡಿಗೆಗಳಲ್ಲಿ ತುಂಬಿಕೊಂಡು ಅದನ್ನು ತನ್ನ ಬಂಡಿ (ಚಕ್ಕಡಿ) ಯಲ್ಲಿ ಹೇರಿಕೊಂಡು ತನ್ನ ಸ್ವಗ್ರಾಮವಾದ ಗಬ್ಬೂರಿನತ್ತ ಬರಲು, ಅಲ್ಲಿನ ಹಲವು ಬ್ರಾಹ್ಮಣರು ಇವನನ್ನು ತಮ್ಮ ಧರ್ಮದಿಂದ ಬಹಿಷ್ಕರಿಸಿದ್ದಲ್ಲದೆ ಅವನನ್ನು ಊರ ಒಳಕ್ಕೆ ಬಿಡಬಾರದೆಂದು, ಗಬ್ಬೂರು ಗ್ರಾಮದ ಅಗಸಿಗೆ ಬಂದು ನಮ್ಮ ಗ್ರಾಮದಲ್ಲಿರಬೇಡ ಎಂದು ಬಂಡಿಗೆ ಹೂಡಿದ್ದ ಎತ್ತುಗಳ ಕೊರಳ ಜೆತ್ತುಗೆಗಳನ್ನು ಬಿಚ್ಚಿದರು ತೋರಣಗಳನ್ನು, ಧ್ವಜಗಳನ್ನು, ಕಿತ್ತೆಸೆದರು ಮತ್ತು ಅದರಲ್ಲಿನ ಪಾತ್ರೆಗಳ ಮೇಲಿನ ಮುಚ್ಚಳಗಳನ್ನೆಲ್ಲಾ ಬಿಸಾಡಿ ಒಳಗಿದ್ದ ಆಹಾರ ಪದಾರ್ಥವನ್ನೆಲ್ಲಾ ನೆಲಕ್ಕೆ ಚೆಲ್ಲಿಬಿಟ್ಟರು. ಆದರೆ ಅವರು ಚೆಲ್ಲಿದ ಈ ಪ್ರಸಾದವು ಮಾತ್ರ ಪೂರಿತವಾದದ್ದು, ಅದು ದಗದಗನೇ ಉರಿಯ ಹತ್ತಿತ್ತು ಆ ಉರಿಯು ಬಂಡಿಯನ್ನು ಸುತ್ತುವರಿಯಿತು ಆದುದರಿಂದ ಆ ವಿಪ್ರರು ಅಲ್ಲಿಂದ ಕಾಲ್ತೆಗೆದರು ಇಷ್ಟೇ ಅಲ್ಲ ಅವರ ದೇಹದಲ್ಲೆಲ್ಲಾ ಹುರುಪುಹುಟ್ಟಿತು.

ಆಗ ಅವರು ಆಯ್ಯೋ ಆಯ್ಯೋ ಎಂದು ಒರಲುತ್ತ ತಮ್ಮ ಮನೆಗಳ ಕಡೆಗೆ ಓಡಿಹೋದರು. ಆದರೆ ಅಲ್ಲಿ ಹೋಗಿ ನೋಡಿದರೆ, ಆ ಮನೆಗಳೆಲ್ಲವೂ ಜ್ವಾಲೆಯಿಂದ ಉರಿಯಹತ್ತಿದ್ದವು. ಈ ಸ್ಥಿತಿಯನ್ನು ನೋಡಿ ಬ್ರಾಹ್ಮಣರೆಲ್ಲರೂ ಹೆದರಿದರು. ಆಗ ಅವರು ತಿರುಗಿ ಬಿಬ್ಬಿ ಬಾಚಯ್ಯನಲ್ಲಿಗೆ ಬಂದು ಅವನಿಗೆ ನಮ್ಮದು ಬಹಳ ತಪ್ಪಾಯಿತು, ಪ್ರಸಾದವು ಈ ರೀತಿಯದೆಂದು ನಮಗೆ ತಿಳಿಯಲಿಲ್ಲ. ಇದರಿಂದ ಅವರು ತಮ್ಮ ತಪ್ಪನ್ನು ಒಪ್ಪಿಕೊಂಡು ಬಿಬ್ಬಿಬಾಚಯ್ಯನ ಚರಣಗಳಿಗೆ ಬಿದ್ದು ತಪ್ಪಿನ ಪ್ರಾಯಶ್ಚಿತ್ತಕ್ಕೆ ಮೊರೆಹೊದರು. ತಪ್ಪನ್ನು ಮನ್ನಿಸಿ ಬಿಬ್ಬಿಬಾಚಯ್ಯ ಅವರನ್ನು ಕ್ಷಮಿಸಿ ಅವರ ಮನೆಗೆ ಕಳುಹಿಸಿಕೊಟ್ಟನು.' ಈ ತಪ್ಪಿನ ಪ್ರಾಯಶ್ಚಿತಕ್ಕಾಗಿ ಬ್ರಾಹ್ಮಣರು ಗ್ರಾಮದ ಪೂರ್ವದಿಕ್ಕಿನ 2 ಕಿ.ಮೀ. ಅಂತರದ ಎರೆಹೊಲದಲ್ಲಿರುವ (ಕಪ್ಪು ಭೂಮಿ) ಬಿಬ್ಬಿಬಾಚಯ್ಯ ಶಿವಶರಣನ ಗದ್ದುಗೆ ಇದೆ. ಈ ಗದ್ದುಗೆಗೆ ದಿನಲು ಭಕ್ತಿಪೂರ್ವಕವಾಗಿ ಪೂಜಾ ಮಾಡುತ್ತ ಬರುತ್ತಿದ್ದಾರೆ.

***"ಮರನ ಹೂ ನುಂಗಿ***
***ಅಡಿಯೊಳಗಡಿಗಿ ಹಣ್ಣಾಯಿತ್ತು.***
***ಹಣ್ಣು ಎಳೆಗಾಯಿ ನುಂಗಿ***
***ಹೂ ಮರನ ಉಗಳಿತ್ತು.***
***ಮರ ಮರಣಕ್ಕೆ ತೆರಹಿಲ್ಲ,***
***ಏಣಾಂಕಧರ***
***ಸೋಮೇಶ್ವರಲಿಂಗವನರಿತೆಹೆನೆಂದು."***[2]

ವಚನ ಸಾಹಿತ್ಯದಲ್ಲಿನ ಕಾಯಕ ಮತ್ತು ದಾಸೋಹ ತತ್ವಗಳು ಸಾಮಾಜಿಕವಾದ ಬದಲಾವಣೆಗೆ ಮುನ್ನುಡಿಯಾಗಿವೆ. ಪ್ರಸಾದವನ್ನು ತಂದು ದಾಸೋಹವನ್ನು ನೀಡುವ ಕಾಯಕ ಮಾಡಿದ ಬಿಬ್ಬಿಬಾಚರಸ ಪ್ರಸಾದಿಯ ಪ್ರಸಾದಿ ಎಂದನೇಸಿಕೊಂಡರು.

ರಾಯಚೂರು ಜಿಲ್ಲಾ ದೇವದುರ್ಗ ತಾಲೂಕಿನ ಗಬ್ಬೂರು ಗ್ರಾಮವನ್ನು ಶ್ರೇಷ್ಟಗೊಳಿಸಿದ ಕೀರ್ತಿ ಬಿಬ್ಬಿಬಾಚರಸನಿಗೆ ಸಲ್ಲುತ್ತದೆ. 12ನೇ ಶತಮಾನದ ಕಲ್ಯಾಣದ ಶರಣರು ಸಹ ಈ ಗಬ್ಬೂರು ಕಡೆ ನೋಡುವಂತೆ ಮಾಡಿದ್ದು ಬಾಚರಸನ ಪ್ರಸಾದಿಯ ಕಾಯಕದಿಂದ. ಇಲ್ಲಿನ ವಿಪ್ರರು ಪ್ರಸಾದನ್ನು ಎಂಜಲು ಎಂದು ಜರಿದಿದ್ದುಕ್ಕೆ ಒಂದು ಪವಾಡ ಸಾದೃಷ್ಯವೇ ಆಗುತ್ತದೆ. ಪವಾಡದ ನಂತರ ಪ್ರಸಾದದ ಮಹತ್ವ ಅರಿವಾಗುತ್ತದೆ. ಕಾಯಕದ ನಿಷ್ಠೆಯಿರುವಂತಹ ವ್ಯಕ್ತಿಯನ್ನು ಯಾರು ತಡೆಯುವುದಕ್ಕೆ ಸಾಧ್ಯವಿಲ್ಲ ಎಂದು ತಿಳಿಯುತ್ತದೆ. ಬಿಬ್ಬಿ ಬಾಚಾರಸರ ದೃಷ್ಟಿಯಲ್ಲಿ ಪ್ರಸಾದದ ಮಹತ್ವ ಕೇವಲ ಸೇವನೆಯ ಕ್ರಿಯೆಗೆ ಸೀಮಿತವಲ್ಲ. ಪ್ರಸಾದ ಸ್ವೀಕರಿಸುವ ಕ್ಷಣದಲ್ಲಿ ಭಕ್ತನ ಮನಸ್ಸಿನಲ್ಲಿ ಮೂಡುವ ವಿನಮ್ರತೆ, ಕೃತಜ್ಞತೆ ಮತ್ತು ಭಕ್ತಿಭಾವಗಳೇ ನಿಜವಾದ ಮೌಲ್ಯಗಳು. ಶುದ್ಧ ಮನಸ್ಸಿನಿಂದ ಸ್ವೀಕರಿಸದಿದ್ದರೆ, ಪ್ರಸಾದವೂ ಫಲಕಾರಿಯಾಗದು ಎಂದು ಅವರು ಸೂಚಿಸುತ್ತಾರೆ. 'ಮನ ಶುದ್ಧವಿಲ್ಲದೆ ಮಡಕೆ ಶುದ್ಧಿಯಾದರೇನು?' ಎಂಬ ಆಶಯದ ಮಾತುಗಳು ಅವರ ವಚನಗಳಲ್ಲಿ ಕಾಣಸಿಗುತ್ತವೆ. ಅಂದರೆ ಬಾಹ್ಯ ಶುದ್ಧಿಗಿಂತ ಆಂತರಿಕ

ಶುದ್ಧಿಯೇ ಮಹತ್ವವಾದದ್ದು ಎಂಬುದು ಅವರ ಬೋಧನೆ.

ಇಂದಿನ ಸಮಾಜದಲ್ಲಿಯೂ ಬಿಬ್ಬಿ ಬಾಚಾರಸರ ಪ್ರಸಾದದ ಕುರಿತು ನೀಡಿದ ಸಂದೇಶ ಅತ್ಯಂತ ಪ್ರಸ್ತುತವಾಗಿದೆ. ಪ್ರಸಾದವನ್ನು ಕೇವಲ ಆಚರಣೆಯ ಭಾಗವಾಗಿ ನೋಡದೆ, ಮನುಷ್ಯನ ಅಂತರಂಗ ಪರಿವರ್ತನೆಯ ಮಾರ್ಗವಾಗಿ ಅರ್ಥೈಸಬೇಕಾಗಿದೆ. ಅಹಂಕಾರ ತ್ಯಾಗ, ಸಮಾನತೆ, ಸೇವಾಭಾವ ಮತ್ತು ಮಾನವೀಯತೆ ಇವೆಲ್ಲವೂ ಸೇರಿ ರೂಪುಗೊಳ್ಳುವ ಜೀವನಶೈಲಿಯೇ ನಿಜವಾದ ಪ್ರಸಾದ ಎಂದು ಅವರ ವಚನಗಳು ನಮಗೆ ಬೋಧಿಸುತ್ತವೆ. ಹೀಗಾಗಿ ಪ್ರಸಾದವು ದೈವಾನುಗ್ರಹದ ಸಂಕೇತ ಮಾತ್ರವಲ್ಲ; ಅದು ಮಾನವೀಯ ಮೌಲ್ಯಗಳ ಪ್ರತೀಕ, ಸಾಮಾಜಿಕ ಸಮಾನತೆಯ ಸಾಧನ ಮತ್ತು ಆಧ್ಯಾತ್ಮಿಕ ಜಾಗೃತಿಯ ಮಾರ್ಗ. ಅವರ ವಚನಗಳ ಸಂದೇಶವನ್ನು ಅರ್ಥಮಾಡಿಕೊಂಡಾಗ, ಪ್ರಸಾದದ ನಿಜವಾದ ಮಹತ್ವ ನಮ್ಮ ಬದುಕಿನಲ್ಲಿ ಇನ್ನಷ್ಟು ಸ್ಪಷ್ಟವಾಗಿ ಬೆಳಗುತ್ತದೆ.

**ಕೊನೆ ಟಿಪ್ಪಣಿಗಳು**

1. ಬಸವಲಿಂಗ ಸೊಪ್ಪಿಮಠ (1997). *ಗೊಬ್ಬೂರು ಶ್ರೀ ಬಿಬ್ಬಿಬಾಚರಸರು. ಶ್ರೀ ಗಾಂಜಿಗುಡಿ ಮಠ ಬಸವರಾಜಯ್ಯ*, ಪುಟ. 15.
2. ಅದೇ., ಪುಟ. 3.

**ಪರಾಮರ್ಶನ ಗ್ರಂಥಗಳು**


- ಬಸವಲಿಂಗ ಸೊಪ್ಪಿಮಠ. (1997). *ಗೊಬ್ಬೂರು ಶ್ರೀ ಬಿಬ್ಬಿಬಾಚರಸರು ಶ್ರೀ ಗಾಂಜಿಗುಡಿ ಮಠ ಬಸವರಾಜಯ್ಯ*, ಗೊಬ್ಬೂರು.
- ಚನ್ನಬಸಪ್ಪ, ಬಿ. (2010). *ರಾಯಚೂರು ಜಿಲ್ಲೆಯ ಚರಿತ್ರೆ : ಶಾಸನಗಳ ಹಿನ್ನೆಲೆಯಲ್ಲಿ.* ಅಕ್ಷರ ಮಂಟಪ.
- ಹೊನ್ನುಸಿದ್ಧಾರ್ಥ, ಸಿ.ಬಿ. (ಸಂ.) (2014). ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ ಸಂಪುಟ–3
- ನಾಗಲೀಕರ್, ಬಿ.ಹೆಚ್. (1997). ವಚನ ದರ್ಶನ, ಶ್ರೀ ನಿಜಾನಂದ ಸಾಂಸ್ಕೃತಿಕ ಸೇವಾ ಸಮಿತಿ.